# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:24-08-2015ರ ನಡವಳಿಗಳು

## ವಿಷಯದ ಸಂಖ್ಯೆ : 163 / 2015-16

ವಿಷಯ: ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಉದ್ಯಾನವನಗಳು, ಆಟದ ಮೈದಾನಗಳು, ರುದ್ರಭೂಮಿಗಳು, ಸ್ಮಶಾನಗಳು ಇತ್ಯಾದಿಗಳನ್ನು ಹಸ್ತಾಂತರಿಸುವ ಬಗ್ಗೆ.

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಉದ್ಯಾನವನಗಳು, ಆಟದ ಮೈದಾನಗಳು, ರುದ್ರಭೂಮಿಗಳು, ಸ್ಮಶಾನಗಳು ಇತ್ಯಾದಿ ಹಸ್ತಾಂತರಿಸುವ ಕುರಿತಂತೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:14-08-2015ರ ಟಿಪ್ಪಣಿ.

1. ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ 8 ವಲಯಗಳಲ್ಲಿ ಎಲ್ಲಾ ಆಟದ ಮೈದಾನಗಳು (ಶಾಲೆ ಮತ್ತು ಕಾಲೇಜುಗಳಲ್ಲಿರುವ ಆಟದ ಮೈದಾನಗಳನ್ನು ಹೊರತುಪಡಿಸಿ) ರುದ್ರಭೂಮಿಗಳು, ಸ್ಮಶಾನಗಳು ಇತ್ಯಾದಿಗಳನ್ನು ಸಂಬಂಧಪಟ್ಟ ವಲಯದ ಅಧಿಕಾರಿಗಳು ಕೂಡಲೇ ವಲಯದ ತೋಟಗಾರಿಕೆ ಅಧೀಕ್ಷಕರುರವರಿಗೆ ನಿಯಮಾನುಸಾರವಾಗಿ ಹಸ್ತಾಂತರಿಸಬೇಕಾಗಿರುತ್ತದೆ.
2. ಪಾಲಿಕೆಯ ವ್ಯಾಪ್ತಿಯಲ್ಲಿ ರುವ 8 ವಲಯಗಳಲ್ಲಿ ಎಲ್ಲಾ ಆಟದ ಮೈದಾನಗಳು (ಶಾಲೆ ಮತ್ತು ಕಾಲೇಜುಗಳಲ್ಲಿರುವ ಆಟದ ಮೈದಾನಗಳನ್ನು ಹೊರತುಪಡಿಸಿ), ರುದ್ರಭೂಮಿಗಳು, ಸ್ಮಶಾನಗಳು ಇತ್ಯಾದಿಗಳನ್ನು ವಲಯಕ್ಕೆ ಸಂಬಂಧಿಸಿದ ತೋಟಗಾರಿಕೆ ಅಧೀಕ್ಷಕರು ಕೂಡಲೇ ವಶಕ್ಕೆ ನಿಯಮಾನುಸಾರವಾಗಿ ಪಡೆಯಬೇಕಾಗಿರುತ್ತದೆ.
3. ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ 8 ವಲಯಗಳಲ್ಲಿ ಬರುವ ಸಂಬಂಧಪಟ್ಟ ತೋಟಗಾರಿಕೆ ಅಧೀಕ್ಷಕರು ಮೇಲೆ ಸೂಚಿಸಿರುವ ಸ್ಥಳಗಳನ್ನು ತಪಾಸಣೆ ಮಾಡಿ ವಾರ್ಡ್‌ವಾರು ಪಟ್ಟಿ ಮಾಡಿ ಪ್ರತ್ಯೇಕವಾಗಿ ಅಗತ್ಯವಿರುವ ಶೌಚಾಲಯಗಳ ವ್ಯವಸ್ಥೆ ಸ್ವಚ್ಛತೆ, ನೀರು ಸರಬರಾಜು, ಭದ್ರತಾ ವ್ಯವಸ್ಥೆ, ಚೈನ್‌ಲಿಂಕ್ ಫೆನ್ಸಿಂಗ್ ವ್ಯವಸ್ಥೆ, ಗೇಟುಗಳು ಮತ್ತು ಸೂಚನಾ ಫಲಕಗಳನ್ನು ಅಳವಡಿಸಲು ಅಂದಾಜು ಪಟ್ಟಿಗಳನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದುಕೊಂಡು ನಿಯಮಾನುಸಾರ ಕ್ರಮಗಳನ್ನು ಕೈಗೊಳ್ಳಲು ಸೂಚಿಸಿದೆ.
4. ಪಾಲಿಕೆಯ ವ್ಯಾಪ್ತಿಯಲ್ಲಿ ಬರುವ 8 ವಲಯಗಳಲ್ಲಿ ಯಾವುದೇ ಉದ್ಯಾನವನಗಳು ಅಭಿವೃದ್ಧಿ ಆಗದೇ ಇದ್ದಲ್ಲಿ, ಇಂತಹ ಉದ್ಯಾನವನಗಳನ್ನು ಆಟದ ಮೈದಾನಗಳ ಉಪಯೋಗಕ್ಕಾಗಿ ಬದಲಾಯಿಸಲು ಅಗತ್ಯ ಕ್ರಮಗಳನ್ನು ತುರ್ತಾಗಿ ಕೈಗೊಳ್ಳಬೇಕಾಗಿರುತ್ತದೆ.
5. ಮೇಲಿನ ಕ್ರಮಗಳನ್ನು ಕೈಗೊಂಡಿದ್ದಲ್ಲಿ ಸಾರ್ವಜನಿಕರ ಜೀವನದ ಗುಣಮಟ್ಟವನ್ನು ಏರಿಸಲು ಸಾಧ್ಯವಾಗುತ್ತದೆ.
6. ಮೇಲೆ ತಿಳಿಸಿರುವ ಸೂಚನೆಗಳನ್ನು ಕರ್ನಾಟಕ ಉದ್ಯಾನವನ ಮತ್ತು ಆಟದ ಮೈದಾನಗಳ ಅಧಿನಿಯಮದ ಪ್ರಕಾರ ಕ್ರಮಗಳನ್ನು ಕೈಗೊಳ್ಳಬೇಕಾಗಿರುತ್ತದೆ.

**ತೀರ್ಮಾನ: "ಅನುಮೋದಿಸಿದೆ".**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು

## ಮಾರುಕಟ್ಟೆ ಸ್ಥಾಯಿ ಸಮಿತಿ ಹಾಗೂ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಸಭೆಯ ಅಧಿಕಾರಗಳನ್ನು ಚಲಾಯಿಸಿ ಆಡಳಿತಗಾರರ ದಿನಾಂಕ:24–08–2015ರ ನಡವಳಿಗಳು

## ವಿಷಯದ ಸಂಖ್ಯೆ : 164 / 2015–16

ವಿಷಯ: ಶ್ರೀ. ಕೃಷ್ಣರಾಜೇಂದ್ರ ಮಾರುಕಟ್ಟೆ ಅಪ್ಪರ್‌ಬೇಸ್‌ಮೆಂಟ್‌ನಲ್ಲಿ ಮಳಿಗೆಗಳ ಹಂಚಿಕೆ ಕುರಿತ ಮಾರುಕಟ್ಟೆ ಸ್ಥಾಯಿ ಸಮಿತಿಯ ನಿರ್ಣಯವನ್ನು ಮತ್ತು ಆದೇಶಗಳನ್ನು ರದ್ದುಪಡಿಸುವ ಕುರಿತು.

**ಪ್ರಸ್ತಾವನೆ:**

ಟಿಪ್ಪಣಿಯಲ್ಲಿ ವಿವರಿಸಿರುವಂತೆ, ಶ್ರೀ. ಕೃಷ್ಣರಾಜೇಂದ್ರ ಮಾರುಕಟ್ಟೆ ನೂತನ ಸಂಕೀರ್ಣದ ಅಪ್ಪರ್‌ಬೇಸ್‌ಮಂಟ್‌ನಲ್ಲಿ ಈ ಕೆಳಕಂಡ ಜಾಗಗಳನ್ನು ಮಳಿಗೆ ನಿರ್ಮಾಣಕ್ಕಾಗಿ ವಿವಿಧ ವ್ಯಕ್ತಿಗಳಿಗೆ ಹಂಚಿಕೆ ಮಾಡಲಾಗಿದೆ.

| ಕ್ರ ಸಂ. | ಮಂಜೂರಾತಿ ಪ್ರಾಧಿಕಾರದ ವಿವರಗಳು | ಮಳಿಗೆ ಸಂಖ್ಯೆ | ಹಂಚಿಕೆದಾರರ ಹೆಸರು | ಷರಾ |
|---|---|---|---|---|
| 1 | ಮಾ.ಸ್ಥಾ.ಸ/01/11–12, ದಿನಾಂಕ:08–04–2011 | ಬಿ–337ಡಿ | ಶ್ರೀರಾಮ್ ಬಿನ್ ಅಪ್ಪಾಜಪ್ಪ | |
| 2 | ಆಯುಕ್ತರವರ ಆದೇಶ ಸಂಖ್ಯೆ:ಪಿ.ಎಸ್.ಆರ್/ಜಿ/10–11 ದಿನಾಂಕ:28–05–2010 ಮತ್ತು 27–09–2010 | 256ಎ | ಕೆ.ಶ್ರೀನಾಥ್ | |
| 3 | ಆಯುಕ್ತರವರ ಆದೇಶ ಸಂಖ್ಯೆ:ಪಿ.ಎಸ್.ಆರ್/ಜಿ/10–11 ದಿನಾಂಕ:28–05–2010 ಮತ್ತು 27–09–2010 | 256ಬಿ | ಶಿವಣ್ಣ ಬಿನ್ ಮೊಳ್ಳೇಗೌಡ | |
| 4 | ಮಾ.ಸ್ಥಾ.ಸ/01/11–12, ದಿನಾಂಕ:08–04–2011 | 256ಸಿ | ಎಸ್.ತೇಜಸ್ ಬಿನ್ ಎಸ್.ಟಿ.ಶ್ರೀನಿವಾಸ್ | |
| 5 | ಆಯುಕ್ತರವರ ಆದೇಶ ಸಂಖ್ಯೆ:ಪಿ.ಎಸ್.ಆರ್/ಜಿ/10–11 ದಿನಾಂಕ:28–05–2010 ಮತ್ತು 27–09–2010 | 337ಬಿ | ಶಿವಕುಮಾರ್ ಬಿನ್ ಕೆ.ಬಸವರಾಜು | |
| 6 | ಆಯುಕ್ತರವರ ಆದೇಶ ಸಂಖ್ಯೆ:ಪಿ.ಎಸ್.ಆರ್/ಜಿ/10–11 ದಿನಾಂಕ: 28–05–2010 ಮತ್ತು 27–09–2010 | 337ಎ | ಸೆಂದಿಲ್‌ಕುಮಾರ್ ಬಿನ್ ಮಣಿ | |
| 7 | ಮಾ.ಸ್ಥಾ.ಸ/02/11–12, ದಿನಾಂಕ:15–04–2011 | 233ಬಿ | ಲಕ್ಷ್ಮಿನಾರಾಯಣ ಬಿನ್ ಕೋದಂಡರಾಮ | |
| 8 | ಮಾ.ಸ್ಥಾ.ಸ/02/11–12, ದಿನಾಂಕ:15–04–2011 | 361ಎ | ಖಾದರ್‌ಪಾಷ ಬಿನ್ ಮಹಮದ್ ಪ್ಯಾರು | |
| 9 | ಮಾ.ಸ್ಥಾ.ಸ/02/11–12, ದಿನಾಂಕ:15–04–2011 | 337ಡಿ | ಮಂಜುನಾಥ್ ಬಿನ್ ಸುಬ್ರಮಣಿ | |
| 10 | ಮಾರುಕಟ್ಟೆ ಸ್ಥಾಯಿ ಸಮಿತಿ ದಿನಾಂಕ:29–08–2011 ವಿಷಯದ ಸಂಖ್ಯೆ:ಮಾ.ಸ್ಥಾ.ಸ/15/2011–12 | 4/1 | ಟಿ.ರಾಮಕೃಷ್ಣ | |
| 11 | ಆಯುಕ್ತರು ದಿನಾಂಕ:31–05–2015ರ ಆದೇಶದಂತೆ | 8ಎ | ಶಾಂತಗೌರಿ | |

| | | | | |
|---|---|---|---|---|
| 12 | ಆಯುಕ್ತರು ದಿನಾಂಕ:28-06-2014ರ ಆದೇಶದಂತೆ | 9ಎ | ಹಸೀನ್‌ತಾಜ್ | |
| 13 | ಮಾರುಕಟ್ಟೆ ಸ್ಥಾಯಿ ಸಮಿತಿ ದಿನಾಂಕ:19-01-2015 ವಿಷಯದ ಸಂಖ್ಯೆ:20/2014-15 | 1ಎ | ಸಮೀರಾಬಾನು | |
| 14 | ಆಯುಕ್ತರ ದಿನಾಂಕ:09-02-2015ರ ಆದೇಶದಂತೆ | 8ಬಿ | ಕಲಾ | |
| 15 | ಆಯುಕ್ತರ ದಿನಾಂಕ:09-02-2015 | 137ಎ | ಶಾರದಮ್ಮ | |

ಮೇಲ್ಕಂಡ ಪಟ್ಟಿಯಲ್ಲಿ ಮಳಿಗೆ ಕ್ರಮ ಸಂಖ್ಯೆ:02, 04, 07, 08, 10, 11, 12, 13, 14, 15 ಹಂಚಿಕೆದಾರರು ಘನ ನ್ಯಾಯಾಲಯದಲ್ಲಿ ಪಾಲಿಕೆಯ ವಿರುದ್ಧ ಹೂಡಿದ್ದ ದಾವೆಯಲ್ಲಿ ಪಾಲಿಕೆಯು ಸದರಿ ಮಳಿಗೆದಾರರನ್ನು ತೆರವುಗೊಳಿಸುವ ಕಾರ್ಯಾಚರಣೆಗೆ ತಡೆಯಾಜ್ಞೆ ಜಾರಿ ಮಾಡಿರುತ್ತದೆ. ಉಳಿಕೆ ಮಳಿಗೆ ಕ್ರಮ ಸಂಖ್ಯೆ:01, 03, 05, 06, 09 ಹಂಚಿಕೆದಾರರಿಗೆ ಘನ ನ್ಯಾಯಾಲಯದಲ್ಲಿ ಯಾವುದೇ ತಡೆಯಾಜ್ಞೆ ಜಾರಿ ಮಾಡಿರುವುದಿಲ್ಲ ಎಂದು ದೃಢೀಕರಿಸಿಕೊಳ್ಳಲಾಗಿದೆ.

ನ್ಯಾಯಾಯದಲ್ಲಿ ತಡೆಯಾಜ್ಞೆ ಜಾರಿಯಾಗಿರುವ ಪ್ರಕರಣಗಳಲ್ಲಿ ದಾವೆಗಳಿಗೆ ಕಂಡಿಕೆವಾರು ಉತ್ತರಗಳನ್ನು ತಯಾರಿಸಿ ಸಂಬಂಧಪಟ್ಟ ಪಾಲಿಕೆ ವಕೀಲರಿಗೆ ನೀಡಿ ತಡೆಯಾಜ್ಞೆಗಳನ್ನು ತುರ್ತಾಗಿ ತೆರವುಗೊಳಿಸುವ ಕಾರ್ಯವು ಜಾರಿಯಲ್ಲಿರುತ್ತದೆ ಹಾಗೂ ತಡೆಯಾಜ್ಞೆ ಜಾರಿಯಾಗದಿರುವ ಪ್ರಕರಣದಲ್ಲಿ ಕೆ.ಎಂ.ಸಿ. ಕಾಯ್ದೆ ಕಲಂ 378ರ ಅನುಸಾರ ಕಲಂ 370ರ ನೋಟೀಸ್‌ಗಳನ್ನು ಕೇವಿಯೇಟ್ ದಾಖಲಿಸಿ ಹಂಚಿಕೆದಾರರಿಗೆ ಜಾರಿ ಮಾಡಿ ತೆರವುಗೊಳಿಸುವ ಕಾರ್ಯಾಚರಣೆ ಕಾರ್ಯವು ಪ್ರಗತಿಯಲ್ಲಿದೆ.

ದಿನಾಂಕ:15-07-2015 ರಂದು ಪಾಲಿಕೆಯ ಕಾನೂನು ಮುಖ್ಯಸ್ಥರು ರವರು ಈ ಹಿಂದೆ ಪಾಲಿಕೆಯ ವಿವಿಧ ಮಾರುಕಟ್ಟೆ ಸ್ಥಾಯಿ ಸಮಿತಿಗಳು ಹಂಚಿಕೆ ಕುರಿತು ಮಾಡಿರುವ ನಿರ್ಣಯಗಳನ್ನು ರದ್ದುಗೊಳಿಸಲು ಪಾಲಿಕೆ ಮಾರುಕಟ್ಟೆ ಸ್ಥಾಯಿ ಸಮಿತಿಯ ಅಧಿಕಾರವನ್ನು ಚಲಾಯಿಸಿ ಮಾನ್ಯ ಆಡಳಿತಗಾರರ ನಿರ್ಣಯಕ್ಕಾಗಿ ಟಿಪ್ಪಣಿಯನ್ನು ಮಂಡಿಸಲು ಅಭಿಪ್ರಾಯ ನೀಡಿರುತ್ತಾರೆ.

ಮಾರುಕಟ್ಟೆ ಸ್ಥಾಯಿ ಸಮಿತಿ ಹಾಗೂ ಆಯುಕ್ತರವರ ಆದೇಶದ ಮೇರೆಗೆ, ಮೇಲ್ಕಂಡ ಹಂಚಿಕೆಗಳಿಂದ ಶ್ರೀ ಕೃಷ್ಣರಾಜೇಂದ್ರ ಮಾರುಕಟ್ಟೆ ಅಪ್ಪರ್‌ಬೇಸ್‌ಮೆಂಟ್‌ನಲ್ಲಿ ಸಾರ್ವಜನಿಕರ ಓಡಾಟಕ್ಕಾಗಿ, ಗಾಳಿ ಬೆಳಕಿಗಾಗಿ ಮತ್ತು ಕಸ ವಿಲೇವಾರಿಗಾಗಿ ಮೀಸಲಿಟ್ಟಿದ ಜಾಗಗಳು ಅತಿಕ್ರಮಿಸಲ್ಪಟ್ಟಿದ್ದು, ಸಾರ್ವಜನಿಕರಿಗೆ ಹಾಗೂ ಇತರೆ ಅಧಿಕೃತ ಅಂಗಡಿ ಮಾಲೀಕರುಗಳಿಗೆ ತುಂಬಾ ತೊಂದರೆ ಉಂಟಾಗುತ್ತಿರುವುದರಿಂದ, ಈ ಕುರಿತು ತನಿಖೆಯನ್ನು ಬಿ.ಎಂ.ಟಿ.ಎಫ್ ರವರಿಗೆ ವಹಿಸಬೇಕೆಂದು ಸಾರಿಗೆ ಸಚಿವರು ಹಾಗೂ ಬೆಂಗಳೂರು ಉಸ್ತುವಾರಿ ಸಚಿವರಾದ ಸನ್ಮಾನ್ಯ ಶ್ರೀ. ರಾಮಲಿಂಗಾರೆಡ್ಡಿ ರವರು ಮಾನ್ಯ ಆಯುಕ್ತರಿಗೆ ಪತ್ರ ಮುಖೇನ ಕೋರಿದ್ದು, ಈಗಾಗಲೇ ಬಿ.ಎಂ.ಟಿ.ಎಫ್ ಮತ್ತು ಘನ ಲೋಕಾಯುಕ್ತರವರಲ್ಲಿ ದೂರುಗಳು ದಾಖಲಾಗಿರುತ್ತವೆ.

ಮೇಲ್ಕಂಡ ಅಂಶಗಳ ಹಿನ್ನಲೆಯಲ್ಲಿ, ಸದರಿ ಹಂಚಿಕೆಯ ನಿರ್ಣಯಗಳು ಕೆ.ಎಂ.ಸಿ. ಕಾಯ್ದೆ 1976ರ ಕಲಂ 378(d) ಮತ್ತು (e) ಗಳಿಗೆ ವಿರುದ್ಧವಾಗಿ ಸಾರ್ವಜನಿಕರ ಓಡಾಟಕ್ಕಾಗಿ, ಗಾಳಿ ಬೆಳಕಿಗಾಗಿ ಮೀಸಲಿಟ್ಟ ಸ್ಥಳಗಳನ್ನು ಆಕ್ರಮಿಸಿಕೊಂಡು ನಿಯಮಾವಳಿಗೆ ವಿರುದ್ಧವಾಗಿದ್ದು, ಪಾಲಿಕೆಯ ಆಡಳಿತಾತ್ಮಕ ಹಿತದೃಷ್ಟಿಯಿಂದ ಸದರಿ ಮಳಿಗೆಗಳ ಹಂಚಿಕೆ ಕುರಿತ ಮಾರುಕಟ್ಟೆ ಸ್ಥಾಯಿ ಸಮಿತಿಯ ನಿರ್ಣಯಗಳನ್ನು ಹಾಗೂ ಆಯುಕ್ತರವರ ಆದೇಶಗಳನ್ನು ರದ್ದುಪಡಿಸುವ ಬಗ್ಗೆ ಅನುಮೋದನೆ ಕೋರಿ ಮಾನ್ಯ ಆಡಳಿತಗಾರರ ಮುಂದೆ ಮಂಡಿಸಿರುವ ಆಯುಕ್ತರವರ ದಿನಾಂಕ:12-08-2015ರ ಟಿಪ್ಪಣಿ.

**<u>ತೀರ್ಮಾನ</u>: "ಅನುಮೋದಿಸಿದೆ".**

(ಟಿ.ಎಂ.ವಿಜಯಭಾಸ್ಕರ್)
ಆಡಳಿತಗಾರರು